## ಕಥೋಪದೇಶ

# ಮೂಕವೃಕ್ಷದ ದಾನ

ಮಹಾರಾಜ ರಣಜಿತನು ಊರೊಳಗೆ ವಿಹರಿಸುತ್ತಿದ್ದನು. ಇದ್ದಕ್ಕಿದ್ದಂತೆಯೇ ಒಂದು ಕಲ್ಲು ಬಂದು ಅವನ ಹಣೆಗೆ ತಾಕಿತು. ಘಾಯವಾಗಿ ರಕ್ತ ಸುರಿಯತೊಡಗಿತು. ಸೇವಕರು ಕಲ್ಲು ಎಸೆದವರು ಯಾರೆಂದು ಹುಡುಕಿಕೊಂಡು ಹೊರಟರು. ಒಬ್ಬ ಮುದುಕಿಯನ್ನು ಹಿಡಿದುಕೊಂಡು ಬಂದರು. ಅವಳು ನಡುಗುತ್ತ ತನ್ನ ತಪ್ಪೊಪ್ಪಿಕೊಂಡಳು:

"ಕ್ಷಮಿಸಬೇಕು, ಮಹಾರಾಜ, ಮಗು ದಿನವಿಡೀ ಹಸಿದಿತ್ತು. ಒಂದು ಬೇಲದ ಹಣ್ಣು ಕೀಳುವೆನೆಂದು ಕಲ್ಲೆಸೆದೆ."


ರಾಜನು ಸೇವಕನನ್ನು ಹತ್ತಿರ ಕರೆದು ಹೇಳಿದ : "ಇವಳಿಗೆ ಒಂದು ಸಾವಿರ ರೂಪಾಯಿ ಕೊಡು."

ಸೇವಕನು ಆಶ್ಚರ್ಯದಿಂದ ಕೇಳಿದ: "ಕಲ್ಲಿನಿಂದ ಹೊಡೆದ ಅಪರಾಧಕ್ಕೆ ಈ ಸನ್ಮಾನವೇ!"

ರಾಜನು ಉತ್ತರಿಸಿದ:

"ಇದನ್ನು ತಿಳಿ, ಕಲ್ಲಿನಿಂದ ಹೊಡೆದರೂ ಆ ಮೂಕವೃಕ್ಷ ಹಣ್ಣನ್ನು ಕೊಡುತ್ತದೆ! ಪಂಜಾಬದ ರಾಜನಾದ ನಾನು ಬರಿಗೈಯಲ್ಲಿ ಕಳಿಸಲೆ?"

*



ಕಲೆ: ಪುರುಷೋತ್ತಮ ಕಾರಂತ